ಕರ್ನಾಟಕ ವಿಧಾನ ಸಭೆ

ಶುಕ್ರವಾರ 20ನೇ ಮಾರ್ಚ್ 1998 ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾ ನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ : 10- 10ಗಂಟೆಗೆಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ರಮೇಶ್ ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು

1. ಸಂತಾಪ ಸೂಚನೆ

ವಿಷಯ: ಇ.ಎಂ.ಎಸ್. ನಂಬೂದರಿಪಾಡ್‌ರವರ ನಿಧನ

ಅಧ್ಯಕ್ಷರು:- ಹಿರಿಯಸ್ವಾತಂತ್ರ್ಯ ಹೋರಾಟಗಾರ ಕೇರಳದ ಮಾಜಿ ಮುಖ್ಯ ಮಂತ್ರಿ ರಾಜಕೀಯ ಮೇಧಾವಿ, ಮಾರ್ಕ್ಸ್‌ವಾದಿ ಚಿಂತಕ, ಎಲಂಕುಳಂ ಮಣಿಕ್ಕಲ್ ಶಂಕರನ್ ನಂಬೂದರಿಪಾಡ್‌ರವರು ಇದೇ ಮಾರ್ಚ್ 19, 1998 ರಂದು ಮಧ್ಯಾಹ್ನ 3-40 ಕ್ಕೆ ತಿರುವನಂತಪುರದಲ್ಲಿ ನಿಧನರಾಗಿದ್ದಾರೆ.

ಇ.ಎಂ.ಎಸ್. ಎಂದೇ ಖ್ಯಾತರಾಗಿದ್ದ ಶ್ರೀಯುತರು 1909, ಜೂನ್ 6 ರಂದು ಕೇರಳ ರಾಜ್ಯದ ಪಾಲ್ಘಾಟ್ ಜಿಲ್ಲೆಯ ಎಲಂ ಕುಳಂ ಹಳ್ಳಿಯಲ್ಲಿ ಜನಿಸಿದರು. ಕೇರಳದ ಅತ್ಯಂತ ಶ್ರೀಮಂತ ಹಾಗೂ ಸಂಪ್ರಾದಯದ ಕುಟುಂಬದಲ್ಲಿ ಜನಸಿದ ಇ.ಎಂ.ಎಸ್. ರವರುಬಾಲಕನಾಗಿರುವಾಗಲೇ ಅರ್ಥಹೀನ ಸಾಂಪ್ರದಾಯಕ ಆಚರಣೆಗಳು, ಮುಖ್ಯವಾಗಿ ಅದರಿಂದ ಮಹಿಳೆಯರು, ಅನುಭವಿಸುತ್ತಿದ್ದ, ಯಾತನೆಗಳ ವಿರುದ್ಧ ಸಿಡಿದೆದ್ದವರು, ಈ ಮೂಲಕ ಸಮಾಜ ಸುಧಾರಣಾ ಚಳುವಳಿಗೆ ಧುಮುಕಿದರು. ಕೇರಳದಾದ್ಯಂತ ಈ ಆಂಧೋಲನವನ್ನು ಬೆಳೆಸಲು ಮುಂದಾದರು, ನಂತರದಲ್ಲಿ ನಡಿಯುತ್ತಿದ್ದ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತಮ್ಮನ್ನು ತೊಡಗಿಸಿಕೊಂಡು ಮಹಾತ್ಮ ಗಾಂಧೀಜಿಯವರ ಪ್ರಭಾವಕ್ಕೊಳಗಾಗಿ 1932 ರಲ್ಲಿ ಉಪ್ಪಿನ ಸತ್ಯಾಗ್ರಹ, ಕಾನೂನು ಭಂಗ ಚಳುವಳಿಯಲ್ಲಿ ಭಾಗವಹಿಸಿ, ಹಲವು ವರ್ಷಗಳು ಸೆರೆಮನೆವಾಸ ಅನುಭವಿಸಿದರು.

ಅಖಿಲ ಭಾರತ ಕಾಂಗ್ರೆಸ್‌ನಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದ ಇ.ಎಂ.ಎಸ್. ರವರು ತಾತ್ವಿಕ ಸಂಘರ್ಷದಲ್ಲಿ ಕಾಂಗ್ರೆಸ್ ಸೋಷಿಯಲಿಸ್ಟ ಪಕ್ಷವನ್ನು ರಾಷ್ಟ್ರದಲ್ಲಿ ರೂಪಿಸಲು ಶ್ರಮಿಸಿ 1934ರ ಮೇ ನಲ್ಲಿ ಪಾಟ್ನಾದಲ್ಲಿ ನಡೆದ ಪ್ರಥಮ ಸೋಷಿಯಲಿಸ್ಟ ಸಮ್ಮೇಳನದಲ್ಲಿ ಭಾಗವಹಿಸಿದರು. 1930 ರಿಂದ 1936 ರವರೆಗೆ ಕಾಂಗ್ರೆಸ್‌ನಲ್ಲಿದ್ದು, 1934 ರಿಂದ 36 ರವರೆಗೆ ಕೇರಳ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದರು

ಮಾರ್ಕ್ಸ್‌ವಾದಿ ಚಿಂತನೆಗೆ ಆಕರ್ಷಿತರಾಗಿ 1936 ರಲ್ಲಿ ಕಮ್ಯುನಿಸ್ಟ ಪಕ್ಷದ ಸದಸ್ಯರಾದರು, ಬ್ರಿಟಿಷ ವಸಾಹತುವಾದ ವಿರುದ್ಧ ಸ್ವಾತಂತ್ರ್ಯ ಚಳುವಳಿಯಲ್ಲಿ ಅವಿರತವಾಗಿ ಶ್ರಮಿಸಿದರು.

1939-40 ರಲ್ಲಿ ಮದ್ರಾಸ್ ಅಸೆಂಬ್ಲಿಯಲ್ಲಿ ಸದಸ್ಯರಾಗಿದರು. ಸ್ವಾತಂತ್ರ್ಯ ನಂತರದಲ್ಲಿ ಸಮಾಜದಲ್ಲಿನ ಅಸಮಾನತೆ, ಶೋಷಣೆ, ದಬ್ಬಾಳಿಕೆಯ ವಿರುದ್ಧ ನಿರಂತರ ಹೋರಾಟ ನಡಿಸುತ್ತಾ ಬಂದ ಇ.ಎಂ.ಎಸ್. ರವರು 1957ರ ಎರಡನೇ ಸಾರ್ವತ್ರಿಕ ಚುನಾವಣೆಯಲ್ಲಿ ಜಗತ್ತಿನಲ್ಲೇ ಮೊದಲ ಬಾರಿಗೆ

ರಾಷ್ಟ್ರದಲ್ಲೇ ಮೊದಲ ಬಾರಿಗೆ ಭೂ ಸುಧಾರಣೆ ಕಾಯ್ದೆಯನ್ನು ಮತ್ತು ಖಾಸಗಿಯವರ ಹಿಡಿತದಲ್ಲಿದ್ದ ಶಿಕ್ಷಣ ದೊರೆಯುವಂತೆ ಮಾಡುವಲ್ಲಿ ಮುಂದಾದರು, ಇ.ಎಂ.ಎಸ್. ರವರು 1962-64 ಮತ್ತು 1967-69 ರವರೆಗೆ ಮುಖ್ಯ ಮಂತ್ರಿಯಾಗಿ ಪುನರ್ ಆಯ್ಕೆಯಾದರು.

ಕೇಂದ್ರ - ರಾಜ್ಯಗಳ ಸಂಬಂಧಗಳು ಫೆಡರಲ್ ತತ್ವದ ಆಧಾರದಲ್ಲಿ ಪುನರ್ ರೂಪುಗೊಳ್ಳಲು ರಾಜ್ಯಗಳಿಗೆ ಹೆಚ್ಚಿನ ಅಧಿಕಾರ ಕೊಡಬೇಕೆಂದು ಪ್ರತಿಪಾದಿಸಿದ ಪ್ರಥಮ ಮುಖ್ಯಮಂತ್ರಿ - ಇ.ಎಂ.ಎಸ್.

ಅದರಂತೆ ರಾಷ್ಟ್ರದಲ್ಲಿಯೇ ಮೊದಲ ಬಾರಿಗೆ ಆರ್ಟಿಕಲ್ - 356 ರ ಪ್ರಕಾರ ವಜಾ ಆದ ಒಂದು ರಾಜ್ಯ ಸರ್ಕಾರವೂ ಇ.ಎಂ.ಎಸ್ ರಷ್ಟೇ ಆಗಿತ್ತು.

ಅನೇಕ ದಶಕಗಳ ಕಾಲ ಸಿಪಿಐ(ಎಂ) ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿಯೂ, ನಿಧನದವರೆವಿಗೂ ಸಿಪಿಐ(ಎಂ)ನ ಪೋಲೀಸ್ ಬ್ಯೂಕಿರೋ ಸದಸ್ಯರಾಗಿದ್ದರು. ಮಹಾತ್ಮಾಗಾಂಧೀಜಿ, ಜವಹರಲಾಲ್ ನೆಹರೂ, ಜಯಪ್ರಕಾಶ್, ನಾರಾಯಣ್ ರಂತಹವರ ಒಡನಾಡಿಯಾಗಿದವರು ಇ.ಎಂ.ಎಸ್. ರವರು. ದಿವಂಗತ ಇ.ಎಂ.ಎಸ್. ರವರ ಕೊಡುಗೆ ಕೇವಲ ರಾಜಕೀಯ ಕ್ಷೇತ್ರಕ್ಕೆ ಸೀಮಿತವಾದುದಲ್ಲ, ಸಾಹಿತ್ಯ ಸಾಂಸ್ಕೃತಿಕ ತತ್ವಶಾಸ್ತ್ರ, ಇತಿಹಾಸ ಹಾಗೂ ಆರ್ಥಿಕ ಕ್ಷೇತ್ರದಲ್ಲಿ ಅಗಾಧವಾದ ಪಾಂಡಿತ್ಯ ಹೊಂದಿ ಬಹುಮುಖಿ ಕೊಡುಗೆ ನೀಡಿದ್ದಾರೆ, ಹಲವಾರು ವಿದ್ವತ್ ಪೂರ್ಣ ಗ್ರಂಥಗಳನ್ನು ರಚಿಸಿದ್ದಾರೆ ಅನೇಕ ಪತ್ರಿಕೆಗಳಿಗೆ ವಿಚಾರಧಾರೆ ಹಂಚಿದ್ದಾರೆ, ಅವರ ಅತ್ಯಂತ ಸರಳ ಜೀವನ, ಸರ್ವವನ್ನು ಸಮಾಜಕ್ಕೆ ಒಪ್ಪಿಸಿಕೊಂಡ ಅವರ ಅಸುಪಮ ತ್ಯಾಗ, ವಿವಿಧ ಕ್ಷೇತ್ರಗಳಲ್ಲಿ ಆಳ ಮತ್ತು ಅಪಾರವಾದ ಪಾಂಡಿತ್ಯ ಅವರನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಒಯ್ದಿದೆ.

ಇ.ಎಂ.ಎಸ್ ರವರು ಇಬ್ಬರು ಗಂಡು ಮತ್ತು ಇಬ್ಬರು ಹೆಣ್ಣು ಮಕ್ಕಳನ್ನು ಬಿಟ್ಟು ಅಗಲಿದ್ದಾರೆ.

ಇಂತಹ ಮಹಾಚೇತನ, ಮಾರ್ಗದರ್ಶನ ವ್ಯಕ್ತಿತ್ವದ ಇ.ಎಂ.ಎಸ್. ರವರು ನಮ್ಮನ್ನು ಅಗಲಿದ್ದು ನಿಜಕ್ಕೂ ದೇಶಕ್ಕೆ ತುಂಬಲಾರದ ನಷ್ಟವಾಗಿದೆ. ಈ ಸದನವು ಆ ದು:ಖದಲ್ಲಿ ಭಾಗಿಯಾಗಿ ಅಗಲಿದ ಹಿರಿಯ ಮತ್ಸದ್ದಿ ಇ.ಎಂ.ಎಸ್. ರವರಿಗೆ ಭಾವಪೂರ್ಣ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತದೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

(2) ಪ್ರಶ್ನೋತ್ತರಗಳು

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಬೆಂಗಳೂರಿನ ಕಬ್ಬನ್ ಉದ್ಯಾನವನ ಅಭಿವೃದ್ಧಿ

61(240) ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಬ್ಬನ್ ಉದ್ಯಾನವನ ಯಾವಾಗ ಹಾಗೂ ಯಾರಿಂದ ನಿರ್ಮಾಣ ಮಾಡಲಾಯಿತು?

ಆ) ಅಂದು ಕಬ್ಬನ್ ಉದ್ಯಾನವನ ವಿಸ್ತೀರ್ಣ ಎಷ್ಟು ಇತ್ತು ಹಾಗೂ ಇಂದು ಇರುವ ವಿಸ್ತೀರ್ಣ ಎಷ್ಟು ?